ಎಂಬ ಭಯದಿಂದ, ಆತಂಕದಿಂದ ಬಂದರೆ ಏನಾಗುತ್ತದೆ ? ನಿಮಗೆ ಸತ್ಯ ಗೊತ್ತಾಗಬೇಕು. It may be bitter, ಗೊತ್ತಾಗಬೇಕು. ಅದಕ್ಕೋಸ್ಕರ ಹೇಳುತ್ತಿದ್ದೇನೆ, ಇನ್ನೂ ಸಾಕಷ್ಟು ಮಾಹಿತಿಯನ್ನು ತಮಗೆ ಸಲ್ಲಿಸುತ್ತೇನೆ. ನಾವು, ನಮ್ಮ ಸ್ನೇಹಿತರು ಸಲ್ಲಿಸುತ್ತಾರೆ. ಆ ಸಭೆಯಲ್ಲಿ ಹೇಳುತ್ತಾರೆ. ಅದಕ್ಕೋಸ್ಕರ ನಮ್ಮ ಪ್ರೆಸ್ಟೀಜ್ ಏನಿಲ್ಲ, ಆತಂಕದಿಂದ ಹೇಳುತ್ತಿದ್ದೇವೆ. ತಮ್ಮ ಒಂದು ಬೋನಾಫೈಡ್ ಇಲ್ಲಿ ಗೊತ್ತಾಗುತ್ತದೆ. ಇವರೇನೋ ಹೇಳುತ್ತಿದ್ದಾರೆ. ಅದರಲ್ಲಿ ಸತ್ಯವಿರಬಹುದು, ಯಾವುದೋ ಅಲ್ಟೀರಿಯರ್ ಮೋಟೀವ್‌ನಿಂದ ಹೇಳುತ್ತಿದ್ದಾರೆಂದು ನಮ್ಮ ಬಗ್ಗೆ ಅನ್ನಿಸಿದರೆ ಅದನ್ನು ಅಬೆಯನ್ಸ್‌ನಲ್ಲಿಟ್ಟು, ಮೀಟಿಂಗ್ ಕರೆಯುವವರೆಗೆ ಏನೂ ಆಗುವುದಿಲ್ಲ, ನೀವು ಹೇಳಿದ ಹಾಗೆ ಫಸ್ಟ್ ಸ್ಟೆಪ್ ಕೆಲವರು ಚಾಮುಂಡಿಬೆಟ್ಟಕ್ಕೆ ಕಾರಿನಲ್ಲಿಯೇ ಹೋಗುತ್ತಾರೆ, ಅದು ಫಸ್ಟ್ ಸ್ಟೆಪ್ ನಂತರ ಸೆಕೆಂಡರ್ ಸ್ಟೆಪ್ ಎಂದು ಇರುತ್ತದೆ. ಅದಕ್ಕೋಸ್ಕರ, just keep it in abeyance. 8ನೇ ತಾರೀಖು ಸಭೆ ಕರೆದ ತಕ್ಷಣ ನಾವು ಮಾತನಾಡುತ್ತೇವೆ. ಒಪ್ಪಿದರೆ ಒಪ್ಪಿ, ಇಲ್ಲವೇ ಬಿಡಿ. please go ahead then.

ಶ್ರೀ ಎಸ್.ಎಂ. ಕೃಷ್ಣ : ಸದನಕ್ಕೆ ನಾನೇನು ನಿವೇದಿಸಬೇಕೆಂದಿದ್ದೆ, ಅದನ್ನು ನಾನು ಹೇಳಿ ಮುಗಿಸಿದ್ದೇನೆ.

ಅಧ್ಯಕ್ಷರು : ಈ ವಿಷಯವನ್ನು ಇಲ್ಲಿಗೆ ಸಾಕು ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಚರ್ಚೆಗೆ ಕರೆಯುತ್ತೇವೆ, ಅಲ್ಲಿಯವರೆಗೆ ಮುಂದಿನ ಸ್ಟೆಪ್ಸ್ ತೆಗೆದುಕೊಳ್ಳುವುದಿಲ್ಲವೆಂದಿದ್ದಾರೆ. ಆ ರೀತಿ ಕರೆದು ಮಾತನಾಡಲಿ. ಸಮಸ್ಯೆ ಬಗೆಹರಿಯುತ್ತದೆ.

ಅಧ್ಯಕ್ಷರು : ಸದನ ಶುರುವಾಗಿ ಸುಮಾರು 24 ದಿವಸಗಳಾಯಿತು. ಅದರಲ್ಲಿ 20 ದಿವಸಗಳು ನಾನ್-ಅಫಿಷಿಯಲ್ ಬಿಸಿನೆಸ್ ನಡೆದಿದೆ. ಇವತ್ತು ಅರ್ಧ ಗಂಟೆಯೊಳಗೆ ಕೆಲವು ಸಿಂಗಲ್ ಬಿಲ್ಸ್ ಇವೆ, ಅದನ್ನು ಒಂದು ಅಥವಾ ಎರಡನ್ನಾದರೂ ಮಾಡೋಣ. ಚಂದ್ರೇಗೌಡರೆ, ಯಾವುದು ಅರ್ಜೆಂಟ್ ಆರ್ಡಿನೆನ್ಸ್ ರೀಪ್ಲೇಸ್ ಮಾಡುವ ಬಿಲ್ಸ್ ಇವೆ ?

ಶ್ರೀ ಡಿ.ಬಿ. ಚಂದ್ರೇಗೌಡ : ಮೇಲ್ಮನೆಯಲ್ಲಿ ಮಂಜೂರಾಗಿ ಬಂದ, ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಆಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧಾರಣೆ ವಿಧೇಯಕ, 2002ದ ಮೇಲೆ ಹೆಚ್ಚು ಕಡಿಮೆ ಅರ್ಧ ಗಂಟೆ ಚರ್ಚೆಯಾಗಿದೆ, ಕ್ಲಾರಿಫಿಕೇಷನ್ ಕೂಡ ಮಾಡಿದ್ದೇವೆ. ಆ ಬಿಲ್ ಅನ್ನು ಪಾಸ್ ಮಾಡಬಹುದು. ಏನಾದರೂ ಅಶ್ಯೂರೆನ್ಸ್ ಬೇಕಾದರೆ ಕೇಳಬಹುದು.

MR. SPEAKER : We will take up financial business. ಮಾನ್ಯ ಫೋರ್ಪಡೆಯವರೇ ಬಿಲ್ ಇಂಟ್ರಡ್ಯೂಸ್ ಮಾಡಿ.

2. ಶಾಸನ ರಚನೆ

ಅ) ವಿಧೇಯಕ ಮಂಡನೆ

ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 2002

ಶ್ರೀ ಎಂ.ವೈ. ಫೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, "ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 2002 ಅನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2002ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತ್ತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, "2002ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ. ಅನುಬಂಧ-I

(ಆ) ಪರ್ಯಾಲೋಚನಾ ಪ್ರಸ್ತಾವ : ಕರ್ನಾಟಕ ಸಿವಲ್ ಸೇವೆಗಳಲ್ಲಿಯೆ ಹುದ್ದೆಗಳಿವೆ ಮಿಸಲಾತಿ ಅಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜೇಷ್ಠತೆಯ ನಿರ್ಧಾರಣೆ ವಿಧೇಯಕ, 2002.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮೊನ್ನೆ ಕರ್ನಾಟಕ (ರಾಜ್ಯದ ಸಿವಿಲ್ ಸೇವೆಗಳಲ್ಲಿಯ ಹುದ್ದೆಗಳಿಗೆ) ಮೀಸಲಾತಿ ಅಧಾರದ ಮೇಲೆ ಬಡ್ತಿ ಹೊಂದಿದ ಸರ್ಕಾರಿ ನೌಕರರ ಜ್ಯೇಷ್ಠತೆಯ ನಿರ್ಧಾರಣೆ ವಿಧೇಯಕವನ್ನು ಮಂಡಿಸಿದ್ದು ಇದರ ಬಗ್ಗೆ ಚರ್ಚೆ ಮುಗಿದು ಅನುಮೋದನೆಯ ಹಂತದಲ್ಲಿ ನಿಂತಿತ್ತು, ಅದ್ದರಿಂದ ಮಾನ್ಯ ಸಭೆ ಇದನ್ನು ಮಂಜೂರು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಹಿರಿಯ ಸದಸ್ಯರಾದ ಶ್ರೀಮಾನ ಸೋಮಶೇಖರ್‌ರವರು ಒಂದೆರಡು ಮಾತುಗಳನ್ನು ಹೇಳಿದ್ದರು ಬಹಳ ಮುಖ್ಯವಾಗಿ the proposed Bill does not alter in any way affect the existing promotion policy of vacancy based roster, because we have some reservation about vacancy based reservation. ನಾವು ಶಬ್ದಗಳ ಬಳಕೆ ಮಾಡುವಾಗ ರಾಜ್ಯಾಂಗದ Art. 14(4)ರ ಇದನ್ನು ಬಳಸಿದ್ದೇವೆ, ಅದ್ದರಿಂದ ಅದಕ್ಕೂ ಇದಕ್ಕೂ ಯಾವ ರೀತಿಯ ತೊಂದರೆಯಾಗುವುದಿಲ್ಲ ಎನ್ನುವುದು ಒಂದು. 27-4-1978ರ ಮತ್ತು 24-6-1997ರ order relating to the Rules ಆ ಆದೇಶಕ್ಕಾಗಲಿ or the policy of reservation in promotion as stated in G.O. dt. 3.2.99 modified by the subsequent order on 13.4.99 is also in no way affect by this Notification. ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಾ as a matter of fact, this Bill seeks only to extend to the Government Servants belonging to Scheduled caste and Scheduled Tribes the consequential benfit under the 85th Constitution Amendment. To that limited extent only. ನಾವು ಏನು ಮಸೂದೆಯನ್ನು ತಂದಿದ್ದೇವೆ ಅದ್ದರಿಂದ ಇದನ್ನು ಮಂಜೂರು ಮಾಡಿಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಈಗಾಗಲೇ ಹೇಳಿದೆ, ಸುಪ್ರೀಂಕೋರ್ಟಿನಲ್ಲಿ ಇದರ ಬಗ್ಗೆ ಏನಾದರೂ ಪಿಟಿಷನ್ ಪೆಂಡಿಂಗ್ ಇವೆಯೇ ?

SRI D.B. CHANDREGOWDA : All matters connected with promotion, including the 85th amendment is pending in the Supreme Court. Subject to that only ನಾವು ಮಾಡುತ್ತಾ ಇದ್ದೇವೆ ಆರ್ಡಿನೆನ್ಸ್‌ಅನ್ನು ವ್ಯಾಲಿಡೇಟ್ ಮಾಡುತ್ತಿದ್ದೇವೆ ಶಾಸನ ಮಾಡುತ್ತಿದ್ದೇವೆ ಅಷ್ಟೆ.